(51)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶಗೌಡ ಇವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ.

ವಿಷಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ತೈಲಗೆರೆ ಗ್ರಾಮದ ಸರ್ವೆ ನಂ. 110ರಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆಯು ಸರ್ಕಾರದ ಯಾವುದೇ ನಿಯಮಗಳನ್ನು ಪಾಲಿಸದೇ ನಡೆಯುತ್ತಿದ್ದು ಅಲ್ಲಿನ ಸುತ್ತಮುತ್ತಲಿನ ಗ್ರಾಮಸ್ಥರುಗಳಿಗೆ ಮತ್ತು ರೈತರು ಬೆಳೆಯುವ ಬೆಳೆಗಳ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವುದರಿಂದ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಉತ್ತರ;

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ತೈಲಗೆರೆ ಗ್ರಾಮದ ಸರ್ವೆ ನಂ. 110 ರಲ್ಲಿನ ಸರ್ಕಾರಿ ಗೋಮಾಳ ಪ್ರದೇಶದಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯ ಅನುಮೋದನೆ ನಂತರ ಪರಿಸರ ಅನುಮತಿ ಪತ್ರ ಪಡೆದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಒಟ್ಟು 55-16 ಎಕರೆ ಪ್ರದೇಶದಲ್ಲಿ 14 ಕಟ್ಟಡ ಕಲ್ಲು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ.

ಕಲ್ಲುಗಣಿ ಗುತ್ತಿಗೆದಾರರು ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಸ್ಫೋಟಕಗಳನ್ನು ಬಳಸುತ್ತಿದ್ದು, ಡೈರೆಕ್ಟರ್ ಜನರಲ್ ಮೈನ್ಸ್ ಸೇಫ್ಟಿ (DGMS) ರವರಿಂದ ಸ್ಫೋಟಕ ಬಳಸಲು ಲೈಸೆನ್ಸ್‌ನ್ನು ಪಡೆದ ವ್ಯಕ್ತಿಗಳಿಂದ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತಾರೆ. ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ Foreman ಮತ್ತು Mining Mate ರವರುಗಳನ್ನು ನೇಮಿಸಿಕೊಂಡು ಸದರಿಯವರ ಸಮಕ್ಷಮದಲ್ಲಿ ಸುರಕ್ಷಿತವಾಗಿ ಸ್ಫೋಟಕವನ್ನು ಬಳಸಿ ಗಣಿಗಾರಿಕೆಯನ್ನು ನಡೆಸುತ್ತಿರುವುದು ಕಂಡುಬಂದಿರುತ್ತದೆ. ಸ್ಫೋಟಕ ಬಳಸುವ ಸಮಯದಲ್ಲಿ ಗುತ್ತಿಗೆಯ ಸುತ್ತ-ಮುತ್ತ ಜನ ಜಾನುವಾರುಗಳು ಯಾರು ಇಲ್ಲದೇ ಇರುವ ಬಗ್ಗೆ ಖಾತ್ರಿಪಡಿಸಿಕೊಂಡು ಸೈರನ್ ಮಾಡಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡು ನಿಯಂತ್ರಿತ ಸ್ಫೋಟಕಗಳನ್ನು ಬಳಸುತ್ತಿರುತ್ತಾರೆ.

ಕಲ್ಲುಗಣಿ ಗುತ್ತಿಗೆದಾರರು ಕಲ್ಲುಗಣಿ ಗುತ್ತಿಗೆ ಕರಾರಿನ ಒಡಂಬಡಿಕೆಗಳಂತೆ ಗುತ್ತಿಗೆ ಪ್ರದೇಶದ ಸುತ್ತಲೂ ಸುರಕ್ಷತೆಗಾಗಿ ತಂತಿಬೇಲಿ, ಗಡಿಬಾಂಧುಗಳು ಹಾಗೂ ನಾಮಫಲಕಗಳನ್ನು ಅಳವಡಿಸಿಕೊಂಡಿರುತ್ತಾರೆ. ಕಲ್ಲುಗಣಿ ಗುತ್ತಿಗೆದಾರರು ಗಣಿ ಮತ್ತು ಭೂವಿಜ್ಞಾನ ಇಲಾಖೆಯ Integrated Lease Management System [ILMS] ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಂಡು ಗುತ್ತಿಗೆ ಪ್ರದೇಶದಲ್ಲಿ ಉತ್ಪಾದಿಸಿದ ಕಟ್ಟಡ ಕಲ್ಲಿನ ಸಾಗಾಣಿಕೆಗೆ ಖನಿಜ ಸಾಗಾಣಿಕೆ ಪರವಾನಿಗೆ ಪಡೆಯುತ್ತಿರುತ್ತಾರೆ.

--2

ತೈಲಗೆರೆ ಗ್ರಾಮದ ಸರ್ವೆ ನಂ. 110 ರಲ್ಲಿ 01 ಸ್ಟೋನ್ ಕ್ರಷರ್ ಘಟಕ ಕಾರ್ಯ ನಿರ್ವಹಿಸುತ್ತಿದ್ದು, ಸ್ಟೋನ್ ಕ್ರಷರ್ ಘಟಕದ ಮಾಲೀಕರು ಜಿಲ್ಲಾ ಕಲ್ಲು ಪುಡಿ ಘಟಕದ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಲೈಸೆನ್ಸ್ (ಫಾರಂ-ಸಿ)ನ್ನು ಪಡೆದಿರುತ್ತಾರೆ. ಸ್ಟೋನ್ ಕ್ರಷರ್ ಘಟಕದ ಮಾಲೀಕರು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸಿರುವ ಷರತ್ತುಗಳನ್ವಯ ಕ್ರಷರ್ ಘಟಕದಿಂದ ಧೂಳು ಹೊರಬರದಂತೆ ಸುತ್ತಲೂ ಜಿ.ಐ ಶೀಟ್‌ಗಳನ್ನು ಅಳವಡಿಸಿಕೊಂಡಿರುತ್ತಾರೆ ಮತ್ತು ಸದರಿ ಪ್ರದೇಶದಲ್ಲಿ ಧೂಳು ಹೊರಹೊಮ್ಮದಂತೆ ನೀರನ್ನು ಸಿಂಪಡಿಸುತ್ತಿರುತ್ತಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ತೈಲಗೆರೆ ಗ್ರಾಮದ ಸರ್ವೆ ನಂ. 110ರ ಪ್ರದೇಶದಲ್ಲಿ ಯಾವುದೇ ಅಕ್ರಮ ಮರಳು ಗಣಿಗಾರಿಕೆ / ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಕಂಡು ಬಂದಿರುವುದಿಲ್ಲ.

ಸಂಖ್ಯೆ: ಸಿಐ 70 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.